ಸಿ ಸಿ .ನಂ.**795/2015**

**ಸಿ ಡಬ್ಲ್ಯು – 1**

**ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,**

**ಧಾರವಾಡ**

**ಸಿ ಸಿ .ನಂ 795/2015**

| | |
|---|---|
| ಸಾಕ್ಷಿಯ ಹೆಸರು | : ಪ್ರಹ್ಲಾದ |
| ತಂದೆಯ ಹೆಸರು | : ವೆಂಕಟೇಶ ಜೋಶಿ |
| ವಯಸ್ಸು | : 63 ವರ್ಷ |
| ಉದ್ಯೋಗ | : ವ್ಯಾಪಾರ ಹಾಗೂ ಲೋಕಸಭಾ ಸದಸ್ಯರು, ಕೇಂದ್ರ ಸಚಿವರು |
| ವಾಸಸ್ಥಳ | : ಹುಬ್ಬಳ್ಳಿ |

(**Evidence Before Charge**)

ದಿನಾಂಕ **07-02-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು**.**

**ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರವರಿಂದ.**

1. ನಾನು 2004 ರಿಂದ ಧಾರವಾಡದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. 2013 ರಿಂದ 2016 ಜುಲೈ ವರೆಗೆ ನಾನು ಕರ್ನಾಟಕ ರಾಜ್ಯ ಭಾರತೀಯ ಪಾರ್ಟಿಯ ಅಧ್ಯಕ್ಷನಾಗಿದ್ದೆ. 2019 ರಿಂದ ನರೇಂದ್ರ ಮೋದಿಯವರ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ಮಿನಿಸ್ಟರ್ ಆಗಿದ್ದೇನೆ. ಎಸ್ ಆರ್ ಹಿರೇಮಠ ರವರು ನನ್ನ ವಿರುದ್ಧ ಪದೇ ಪದೇ ಹೇಳಿಕೆ ಕೊಡುತ್ತಿದ್ದರು. ಹಾಗಾಗಿ ಈ ದೂರನ್ನು ಸಲ್ಲಿಸಿರುತ್ತೇನೆ.

2. ಆರೋಪಿಯು ಮೊದಲನೇಯದಾಗಿ ಪ್ರಥಮಬಾರಿಗೆ ಜನೇವರಿ 2014 ನೇ ಇಸವಿಯಲ್ಲಿ ಮೈದಾನ ಕಬಳಿಸಲು ಜೋಶಿ ಶೆಟ್ಟರ ಹುನ್ನಾರ ಎಂಬ ಬಗ್ಗೆ

ಆರೋಪಿಯ ಹೇಳಿಕೆ ಪತ್ರಿಕೆಯಲ್ಲಿ ಬಂದಿತ್ತು. 80 ಕೋಟಿ ಮೌಲ್ಯದ ಮೈದಾನವನ್ನು ಕಬಳಿಸುವ ಹುನ್ನಾರ ಮಾಡುತ್ತಿದ್ದೇನೆ ಎಂದು ನನ್ನ ಮೇಲೆ ಸುಳ್ಳು ಹೇಳಿಕೆ ಕೊಟ್ಟಿರುತ್ತಾರೆ. ಮಾರ್ಚ್ ತಿಂಗಳಿನಲ್ಲಿ ಮತ್ತೊಂದು ಹೇಳಿಕೆಯನ್ನು ಆರೋಪಿಯು ಕೊಟ್ಟಿರುತ್ತಾನೆ. ಮೈದಾನ ಉಳಿಸಲು ಜೋಶಿಯನ್ನು ಸೋಲಿಸಿ ಎಂಬ ಹೇಳಿಕೆಯನ್ನು ಕೊಟ್ಟಿರುತ್ತಾನೆ. ಇದರ ಜೊತೆಗೆ ಮುಂದುವರೆದು ಕರ್ನಾಟಕ ಭ್ರಷ್ಟ ರಾಜಕಾರಣಿಗಳ ಪಟ್ಟಿಯನ್ನು ಬಿಡುಗಡೆ ಮಾಡಿ ಅದರಲ್ಲಿ ನನ್ನ ಹೆಸರನ್ನು ಸೇರಿಸಿ ಭ್ರಷ್ಟ ಜೋಶಿಯನ್ನು ಸೋಲಿಸಿ ಎಂದು ಹೇಳಿಕೆಯನ್ನು ಕೊಟ್ಟಿರುತ್ತಾನೆ. ಈ ಎಲ್ಲ ಹೇಳಿಕೆಗಳು ಜನೇವರಿಯಿಂದ ಎಪ್ರಿಲ್ ವರೆಗೆ ಕೊಟ್ಟಿರುತ್ತಾನೆ. ನಾನು ದಿಃ14–04–2014 ಕ್ಕೆ ವಿಜಯಾನಂದ ಶೆಟ್ಟಿ ಹಾಗೂ ಮೋಹನ ರಾಮದುರ್ಗ ಅವರು ಈ ರೀತಿ ಏಕೆ ಮಾಡಿದಿರಿ ಎಂದು ನನ್ನನ್ನು ಕೇಳಿದರು. ಹಾಗೂ ಮೀಟಿಂಗ್ ದಲ್ಲಿಯೂ ಸಹ ನನ್ನನ್ನು ಕೇಳಿದರು. ಎರಡು ಮೂರು ದಿನಗಳಲ್ಲಿ ಎಲೆಕ್ಷನ ಇದ್ದು, ನನ್ನ ವಿರುದ್ಧ ಅಪಪ್ರಚಾರ ಮಾಡಲು ದುರುದ್ದೇಶ ಪೂರ್ವಕವಾಗಿ ಹೇಳಿಕೆಯನ್ನು ಕೊಟ್ಟಿರುತ್ತಾನೆ. ಹಲವಾರು ಜನರು ಕ್ಯಾಂಪಿಯನ್ ದಲ್ಲಿ ಇದ್ದಾಗ ನನಗೆ ಈ ರೀತಿ ಏಕೆ ಆಗಿದೆ ಎಂದು ಕೇಳಿದರು.

3. ಅದರಿಂದ ನನಗೆ ಮಾನಸಿಕ ತುಂಬಾ ನೋವು ಹಾಗೂ ದುಖಃ ಆಗಿರುತ್ತದೆ. ಸಾರ್ವಜನಿಕ ವಲಯದಲ್ಲಿ ಸಂಶಯ ರೀತಿಯ ಪ್ರಶ್ನೆಗಳು ಹುಟ್ಟಿದವು. ನನ್ನ ವ್ಯಕ್ತಿತ್ವಕ್ಕೆ ಇದರಿಂದ ಧಕ್ಕೆ ಆಯಿತು. ಕಳೆದ 21 ರಿಂದ 22 ವರ್ಷಗಳ ಕಾಲ ನಾನು ಲೋಕಸಭಾ ಸದಸ್ಯ ಇದ್ದೇನೆ, 7 ವರ್ಷಗಳ ಕಾಲ ಮಂತ್ರಿ ಆಗಿದ್ದೇನೆ. ಇದಕ್ಕಿಂತ ಮೊದಲು ಸಹ ನಾನು ಅನೇಕ ಹುದ್ದೆಗಳನ್ನು ನಿರ್ವಹಿಸಿದ್ದೇನೆ. ಹಾಗಾಗಿ ನನಗೆ ಯಾವುದೇ ಮೊದಲು ಒಂದೂ ಕಳಂಕ ಇರಲಿಲ್ಲ. ಆರೋಪಿ ಒಬ್ಬನೇ ಈ ರೀತಿ ಹೇಳಿಕೆ ನೀಡಿ ನನ್ನ ಮಾನ ಹಾನಿ ಮಾಡಿದ್ದಾನೆ. ಚುನಾವಣೆಯಲ್ಲಿ ಹಾಗೂ ಸಾರ್ವಜನಿಕ ವಲಯದಲ್ಲಿ ನನ್ನ ಘನತೆಗೆ ಕುಂದು ತರಲು ಈ ರೀತಿ ಆರೋಪಿಯು ಹೇಳಿಕೆ ಕೊಟ್ಟಿರುತ್ತಾನೆ.

ಸಿ ಸಿ .ನಂ.**795/2015**

**ಸಿ ಡಬ್ಲ್ಯು – 1**

4. ಸಾಕ್ಷಿಯು ತನ್ನ ವಿರುದ್ಧ ಆರೋಪಿಯು ಮಾಡಿರುವ ಹೇಳಿಕೆಗಳು ಪತ್ರಿಕಾ ಪ್ರಕಟಣೆಯಲ್ಲಿ ಬಂದಿರುವ ಹೇಳಿಕೆಗಳನ್ನು ಗುರುತಿಸಿದ್ದು ದಿಃ06-01-2014 ರ ವಿಜಯ ಕರ್ನಾಟಕದ ಪತ್ರಿಕೆಯನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಪತ್ರಿಕಾ ಪ್ರಕಟಣೆಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ದಿಃ23-01-2014 ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಬಂದಿರುವ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರಿಕೆಯನ್ನು ನಿ.ಪಿ.2 ಎಂದು, ಹಾಗೂ ಹೇಳಿಕೆಯ ಭಾಗವನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ದಿಃ09-04-2014 ರ ಹೇಳಿಕೆಯ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಬಂದಿರುವ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರಿಕೆಯನ್ನು ನಿ.ಪಿ.3 ಎಂದು ಹಾಗೂ ಹೇಳಿಕೆಯ ಭಾಗವನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ದಿಃ25-03-2014 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಬಂದಿರುವ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರಿಕೆಯನ್ನು ನಿ.ಪಿ.4 ಎಂದು ಹಾಗೂ ಹೇಳಿಕೆಯ ಭಾಗವನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ದಿಃ14-04-2014 ರ ವಿಜಯ ಕರ್ನಾಟಕದ ದಿನಪತ್ರಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಪತ್ರಿಕೆಯನ್ನು ನಿ.ಪಿ.5 ಎಂದು ಹಾಗೂ ಹೇಳಿಕೆಯ ಭಾಗವನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

5. ಈ ರೀತಿ ಆಧಾರ ರಹಿತ ಹೇಳಿಕೆಯನ್ನು ಕೊಟ್ಟು ನನ್ನ ಮಾನ ಹಾನಿ ಮಾಡಿದ್ದು ಆರೋಪಿಯ ವಿರುದ್ಧ ಕಾನೂನು ಅಡಿಯಲ್ಲಿ ಗರಿಷ್ಟ ಶಿಕ್ಷೆಯನ್ನು ವಿಧಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು

ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

ಸಿ ಸಿ .ನಂ.**795/2015**

**ಸಿ ಡಬ್ಲ್ಯು – 1**

**ಸಿ ಡಬ್ಲ್ಯು – 1**